## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಶಿವರಾಮ್ ಕೆ. ಚವ್ಹಾಣ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಇವರನ್ನು ಸೇವೆಯಿಂದ ಅಮಾನತ್ತುಪಡಿಸುವ ಕುರಿತು- ಆದೇಶ.

**ಓದಲಾಗಿದೆ:** ಪತ್ರ ಸಂಖ್ಯೆ: ಜಿಪಬಿ.ಗ್ರಾಪಂ.ಸಿಆರ್-2011-12, ದಿನಾಂಕ 10/11/2011.

- - -

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್, ಇವರು ಮೇಲೆ ಓದಲಾದ ದಿನಾಂಕ 10/11/2011ರ ಅವರ ವರದಿಯಲ್ಲಿ ಶ್ರೀ ವಿಜಯಕುಮಾರ್ ಸೂರ್ಯವಂಶಿ, ರವರು ಮೂಲತ: ಭಾಲ್ಕಿ ತಾಲ್ಲೂಕು ಬ್ಯಾಲಹಳ್ಳಿ ಗ್ರಾಮ ಪಂಚಾಯತಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ನೇಮಕ ಹೊಂದಿದ್ದು, ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ವರದಿ ಮಾಡಿದ್ದಾರೆ. ಮುಂದುವರೆಸಿ ಈ ಮಧ್ಯೆ ಅವರು ದಿನಾಂಕ 4/8/2011 ರಿಂದ 23/09/2011ರ ವರೆಗೆ ವೈದ್ಯಕೀಯ ಕಾರಣಗಳ ಮೇಲೆ ರಜೆ ಮೇಲೆ ತೆರಳಿ ದಿನಾಂಕ 24/9/2011 ರಂದು ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಹಾಜರಾತಿ ವರದಿ ಸಲ್ಲಿಸಿ ಕರ್ತವ್ಯ ನಿರ್ವಹಿಸುತ್ತಿದ್ದರೆಂದು ತಿಳಿಸಿದ್ದಾರೆ. ಜೊತೆಗೆ ಸದರಿಯವರು ಆತ್ಮಹತ್ಯೆ ಮಾಡಿಕೊಂಡ ಸಮಯದಲ್ಲಿ ಅವರ ಹತ್ತಿರ ಸುಸೈಡ್ ನೋಟ್ ಇರುವ ಬಗ್ಗೆ ಪೊಲೀಸರಿಂದ ತಿಳಿದು ಬಂದಿರುವ ಕುರಿತಾಗಿಯೂ ಸಹ ತಿಳಿಸಿ ಸದರಿ ಸುಸೈಡ್ ನೋಟಿನಲ್ಲಿ ಶ್ರೀ ಶಿವಶೆಟ್ಟಿ ಸೀತಾ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬ್ಯಾಲಹಳ್ಳಿ ಇವರು ಚುನಾಯಿತ ಪ್ರತಿನಿಧಿಗಳ ಮತ್ತು ಸ್ಥಳೀಯ ಜನರೊಂದಿಗೆ ಶಾಮೀಲಾಗಿ ತಮಗೆ ತೊಂದರೆ ಕೊಟ್ಟಿರುವ ಬಗ್ಗೆ ದಾಖಲಿಸಿರುವ ಅಂಶವು ತಿಳಿದು ಬಂದಿರುತ್ತದೆ.

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್, ಇವರ ವರದಿ ಹಾಗೂ ಅದರೊಂದಿಗಿನ ಅಡಕಗಳಲ್ಲಿನ ವಿವರಗಳನ್ನು ಗಣನೆಗೆ ತೆಗೆದುಕೊಂಡು ಕೂಲಂಕಷವಾಗಿ ಪರಿಶೀಲಿಸಿದೆ. ದಿವಂಗತ ಶ್ರೀ ವಿಜಯಕುಮಾರ್ ಸೂರ್ಯವಂಶಿ, ಇವರು ವೈದ್ಯಕೀಯ ರಜೆಯ ಮೇಲೆ ತೆರಳಿ ಹಿಂದಿರುಗಿದ ಸಂದರ್ಭದಲ್ಲಿ ಅವರ ಮೂಲ ಗ್ರಾಮ ಪಂಚಾಯತಿಯಾದ ಬ್ಯಾಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಹಾಜರಾತಿ ಸಲ್ಲಿಸದೆ ಹೆಚ್ಚುವರಿ ಪ್ರಭಾರದಲ್ಲಿನ ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಹಾಜರಾತಿ ಸಲ್ಲಿಸಿದ್ದನ್ನು ಗಮನಿಸಿದಲ್ಲಿ ಅವರು ಅವರ ಮೂಲ ಗ್ರಾಮ ಪಂಚಾಯತಿಯಲ್ಲಿ ತೀವ್ರತರ ಸಮಸ್ಯೆಯನ್ನು ಎದುರಿಸುತ್ತಿದ್ದ ವಿಷಯವು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹೀಗಿದ್ದಾಗ್ಯೂ ಕೂಡ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಶಿವರಾಮ್ ಕೆ.ಚವ್ಹಾಣ್, ರವರು ಸರ್ಕಾರವು ದಿನಾಂಕ 19/10/2011 ರಂದು ಹೊರಡಿಸಿರುವ ಸುತ್ತೋಲೆಯನ್ವಯ ಕ್ರಮ ವಹಿಸದೆ ಬೇಜವಾಬ್ದರಿತನ ಪ್ರದರ್ಶಿಸಿದ ಪರಿಣಾಮವಾಗಿ ಶ್ರೀ ವಿಜಯಕುಮಾರ್ ಸೂರ್ಯವಂಶಿ, ಇವರು ಅತೀವ ಖಿನ್ನತೆಗೆ ಒಳಗಾಗಿ ಆತ್ಮ ಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಒದಗಿ ಬಂದಿರುವುದಕ್ಕೆ ಕಾರಣರಾಗಿರುವ ಅಂಶವು ಸರ್ಕಾರಕ್ಕೆ ಗೋಚರವಾಗಿದೆ.

ಮೇಲೆ ವಿವರಿಸಿರುವ ಅಂಶಗಳ ನೆಲೆಯಲ್ಲಿ ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಶ್ರೀ ಶಿವರಾಮ್ ಕೆ.ಚವ್ಹಾಣ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ:

**ಆದೇಶ ಸಂಖ್ಯೆ: ಗ್ರಾಅಪ 153 ವಿಸೇಬಿ 2011, ಬೆಂಗಳೂರು, ದಿನಾಂಕ:11-11-2011**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು, 1957ರ ನಿಯಮ 10(1)(ಡಿ)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಶಿವರಾಮ್ ಕೆ. ಚವ್ಹಾಣ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಇವರು, ಎಸಗಿರುವ ದುರ್ನಡತೆ ಸಂಬಂಧದ ವಿವರವಾದ ಇಲಾಖಾ ವಿಚಾರಣೆ ನಡೆಸುವುದನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರನ್ನು ಸೇವೆಯಿಂದ ಅಮಾನತ್ತುಪಡಿಸಿದೆ.

ಸದರಿಯವರ ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ. ಈ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/11/11

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್.
3) ಶ್ರೀ ಶಿವರಾಮ್ ಕೆ.ಚವ್ಹಾಣ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ– ಮುಕಾನಿಅ, ಜಿಪಂ, ಬೀದರ್, ಇವರ ಮುಖಾಂತರ.
4) ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಉಪ ಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆ.
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.